

ವಜ್ರಾಭರಣ ಮಹಿಳೆಯರ ಕ್ರೇಜ್. ಸಿನಿಮಾ ನಟಿಯರಿಂದ ಹಿಡಿದು ಸಾಮಾನ್ಯ ಮಹಿಳೆಗೂ ವಜ್ರದ ಮೇಲೆ ಅದೇನೋ ಮೋಹ, ಸೆಳೆತ. ಬಾಲಿವುಡ್ 'ಕನಸಿನ ಕನ್ಯೆ' ಹೇಮಮಾಲಿನಿಗೂ ವಜ್ರದ ನೆಕ್ಲೆಸ್, ಉಂಗುರ, ಕಿವಿಯೋಲೆಗಳ ಮೇಲೆ ವಿಶೇಷ ಒಲವು, ಆಕರ್ಷಣೆ ಅಂತೆ.

■ ಉಮಾ ಅನಂತ್

■ ಚಿತ್ರಗಳು: ಬಿ.ಕೆ. ಜನಾರ್ದನ್

# ವಜ್ರದೊಡವೆಯ ಪ್ರೀತಿ..

ವಜ್ರಾಭರಣಗಳು ಮಹಿಳೆಯರಿಗೆ ಮೆಚ್ಚು. ದುಬಾರಿ ಎನಿಸಿದರೂ ತಿಜೋರಿಯಲ್ಲಿ ಒಂದಾದರೂ ವಜ್ರದ ಒಡವೆ ಇರಬೇಕು ಎಂಬ ತವಕ. ಮಹಿಳೆಯರ ಮನದಿಂಗಿತ ಅರಿತ ವಜ್ರಾಭರಣ ಮಳಿಗೆ ಮಾಲೀಕರು ಮಧ್ಯಮ ವರ್ಗದವರಿಗೂ ಕೆಗೆಟುಕುವ ದರದಲ್ಲಿ ವಜ್ರದ ಆಭರಣ ತಯಾರಿಸಿ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುತ್ತಿದ್ದಾರೆ.

ವಜ್ರದ ಆಭರಣ ಎಂದರೆ ಮಹಿಳೆಯರ ಕಣ್ಣು ಅರಳುತ್ತದೆ. ಇಂತಹ ಹೊಸ ತಂತ್ರಜ್ಞಾನದ ಆಭರಣ ಗ್ರಾಹಕರಲ್ಲಿ ಕುತೂಹಲ ಕೆರಳಿಸುವುದರಲ್ಲಿ ಅನುಮಾನವಿಲ್ಲ. ವಜ್ರದ ಒಡವೆಯಲ್ಲಿ ವಿಭಿನ್ನ ವಿನ್ಯಾಸಗಳ ಆಭರಣವನ್ನು ಹೊರತಂದು ಗ್ರಾಹಕರಿಗೆ ಸದಾ ಹೊಸತನ್ನೇ ನೀಡುತ್ತಿರುವುದು ಫಾರೆವರ್ ಮಾರ್ಕ್ ಡೈಮಂಡ್ಸ್ ಮತ್ತು ಎವಿಆರ್ ಸ್ವರ್ಣಮಹಲ್ ವಜ್ರದ ಆಭರಣ ಮಳಿಗೆ.

ವಜ್ರದ ಆಭರಣ ಬಹು ದುಬಾರಿ. ಆದರೂ ವಜ್ರದ ಆಭರಣಗಳಿಗೆ ಸರಿಸಾಟಿಯಾದ ಆಭರಣ ಯಾವುದೂ ಇಲ್ಲ ಎಂಬುದು ಒಡವೆ ಪ್ರಿಯರ ಅಂಬೋಣ. ವಜ್ರದ ಉಂಗುರ, ಕಿವಿಯೋಲೆ, ನೆಕ್ಲೆಸ್‌ಗಳಿಗೆ ಇಂದಿನ ಫ್ಯಾಷನ್ ಪ್ರಪಂಚದಲ್ಲಿ ಎಲ್ಲಿಲ್ಲದ ಬೇಡಿಕೆ. ಒಂದೇ ಒಂದು ವಜ್ರದ ನೆಕ್ಲೆಸ್, ಒಂದೇ ಉಂಗುರ.. ಹೀಗೆ 'ಸಿಂಗಲ್‌ಪೀಸ್ ಆರ್ನಮೆಂಟ್' ಇಂದಿನ ಟ್ರೆಂಡ್ ಕೂಡ ಆಗಿದೆ. ವಜ್ರದ ನೆಕ್ಲೆಸ್ ಮದುವೆ, ಪಾರ್ಟಿಗಳಿಗೆ ಹೋಗುವಾಗ ಧರಿಸಲು ಸೂಕ್ತವಾದದ್ದು.

ವೈವಿಧ್ಯಮಯ ವಿನ್ಯಾಸದ ವಜ್ರಾಭರಣ ಸಾಮಾನ್ಯವಾಗಿ ಶ್ರೀಮಂತ ವರ್ಗಕ್ಕೇ ಸೀಮಿತ. ಆದರೂ ಈಗ ಮಾರುಕಟ್ಟೆಯಲ್ಲಿ ಮಧ್ಯಮ ವರ್ಗಕ್ಕೂ ಸಿಗುವಂಥ ವಜ್ರಾಭರಣ ಲಭ್ಯ. ಶ್ರೀಮಂತ ಮಹಿಳೆಯರು, ಮಾಡೆಲ್‌ಗಳು, ಸಿನಿಮಾ ನಟಿಯರು ವಜ್ರದ ಆಭರಣಕ್ಕೆ ಹೆಚ್ಚು ಒಲವು ತೋರಿಸುತ್ತಿದ್ದಾರೆ. ಇದು ಸಖತ್ ಗ್ರ್ಯಾಂಡ್‌ಲುಕ್ ಕೊಡುತ್ತದೆ.

## ವಜ್ರದ ಮೇಲೆ ಪ್ರೀತಿ

ಬಾಲಿವುಡ್ ಕನಸಿನ ಕನ್ಯೆ, ನೃತ್ಯಗಾರ್ತಿ ಹೇಮಮಾಲಿನಿಗೆ ವಜ್ರದ ಒಡವೆ ಮೇಲೆ ಅಪರಿಮಿತ ಪ್ರೀತಿ. 'ಹೇಮ' ಎಂದರೆ ಚಿನ್ನ. ನನ್ನ ಹೆಸರೇ ಚಿನ್ನದೊಂದಿಗೆ ಬೆಸೆದುಕೊಂಡಿದೆ ಎನ್ನುತ್ತಲೇ ವಜ್ರ, ಒಡವೆ, ಚಿನ್ನ